# ‘ತಾಳಮದ್ದಳೆಯಲ್ಲಿ ‘ಅಹಂ’ಗೆ ಜಾಗವಿಲ್ಲ’

## ಯಕ್ಷಗಾನ ವಿದ್ವಾಂಸ ಎಂ. ಪ್ರಭಾಕರ ಜೋಶಿ ಸಂದರ್ಶನ

**ಕೋಡಿಬೆಟ್ಟು ರಾಜಲಕ್ಷ್ಮಿ**

ಚಿತ್ರಗಳು: ಫಕ್ರುದ್ದೀನ್ ಎಚ್.

ಭಾರತೀಯ ದರ್ಶನ ಶಾಸ್ತ್ರ, ಚಿಂತನ ವಿಧಾನ ಮತ್ತು ಪುರಾಣ ವಿಚಾರಗಳನ್ನು ಪಂಥೀಯ ಅತಿವಾದಗಳಿಲ್ಲದೆ ಉದಾರ ಗ್ರಹಿಕೆಯಿಂದ ನೋಡಬಲ್ಲ ಎಂ. ಪ್ರಭಾಕರ ಜೋಶಿ ಯಕ್ಷಗಾನ ವಿದ್ವಾಂಸರೆಂದೇ ಗುರುತಿಸಿಕೊಂಡವರು. ಯಕ್ಷಗಾನ ತಾಳಮದ್ದಳೆಯ ಪ್ರಸಿದ್ಧ ಹಾಗೂ ಅಗ್ರ ಪಂಕ್ತಿಯ ಅರ್ಥದಾರಿಯಾಗಿ ಅವರು ರಾಜ್ಯದಾದ್ಯಂತ ಪರಿಚಿತರು. ಮಂಗಳೂರಿನ ಬೆಸೆಂಟ್ ಪದವಿ ಪೂರ್ವ ಕಾಲೇಜಿನಲ್ಲಿ ವಾಣಿಜ್ಯ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ವೃತ್ತಿ ನಿರ್ವಹಿಸಿ ನಿವೃತ್ತರಾದ ಅವರು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದಾರೆ. ಯಕ್ಷಗಾನ ಕ್ಷೇತ್ರವನ್ನು ಅಕಾಡೆಮಿಕ್ ದೃಷ್ಟಿಕೋನದಿಂದ ಅವಲೋಕಿಸಬಲ್ಲ ಅವರು ಬಹುವಿಸ್ತಾರವಾದ ಸಾಹಿತ್ಯ ಕೃಷಿಯನ್ನೂ ಮಾಡಿದ್ದಾರೆ. ಜಾಗರ, ಕೇದಗೆ, ಮಾರುಮಾಲೆ, ಯಕ್ಷಗಾನ ಪದಕೋಶ, ವಾಗರ್ಥ, ತತ್ತ್ವಮನನ ಮುಂತಾದ ಕೃತಿಗಳನ್ನು ರಚಿಸಿದವರು. ಸರಣಿ ಉಪನ್ಯಾಸಗಳನ್ನು ನೀಡಿದವರು. ಅವರಿಗೆ ಯಕ್ಷಗಾನ ಕ್ಷೇತ್ರದ ಮಹತ್ವದ ಪ್ರಶಸ್ತಿಯೆನಿಸಿಕೊಂಡಿರುವ ಪಾರ್ತಿಸುಬ್ಬ ಪ್ರಶಸ್ತಿ, ಕರ್ನಾಟಕ ಯಕ್ಷಗಾನ ಜಾನಪದ ಅಕಾಡೆಮಿ ಗ್ರಂಥ ಪುರಸ್ಕಾರ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪುರಸ್ಕಾರಗಳು ಸಂದಿವೆ. ಅವರೊಡನೆ ‘ಮಯೂರ’ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ